# ಊಟ ಬಲ್ಲವರು

‘ಊಟ ಆಯಿತೇ’ ಅವರ ಪ್ರಶ್ನೆ ಸಹಜವಾಗಿರಲಿಲ್ಲ. ಎಂದೂ ಸುಖಾಸುಮ್ಮನೆ ಫೋನ್ ಮಾಡಿ ಹಾಗೆ ಕೇಳಿದವರಲ್ಲ ಅವರು. ಆವತ್ತು ಹಾಗೆ ಕೇಳಲು ಕಾರಣವಿತ್ತು. ಯಾರಾದರೂ ‘ಹೇಗಿದೆ, ಮೈಗೆ’ ಎಂದು ಕೇಳುತ್ತಾರಲ್ಲ, ಆ ಧಾಟಿಯ ಕುಶಲೋಪರಿಯ ಶೈಲಿಯಲ್ಲಿ ಅವರು ಮಾತನಾಡಿದ್ದು. ಐವತ್ತು ದಿನ ಓಡಿದ ತಮ್ಮ ನಿರ್ಮಾಣದ ಚಿತ್ರವನ್ನು ನೂರು ದಿನ ಓಡಿಸುವ ಯತ್ನದಲ್ಲಿ ಅವರಿದ್ದರು. ಚಿತ್ರಮಂದಿರಗಳು ಸಿಗದೆ ಅನೇಕ ನಿರ್ಮಾಪಕರು ಪರದಾಡುತ್ತಿದ್ದ ಸನ್ನಿವೇಶದಲ್ಲಿ ಕಡಿಮೆ ಬಾಡಿಗೆಯ ಚಿತ್ರಮಂದಿರಕ್ಕೆ ಅವರ ಚಿತ್ರವನ್ನು ಸ್ಥಳಾಂತರಿಸಿ ಹೇಗಾದರೂ ನೂರು ದಿನ ಓಡಿಸಲೇಬೇಕು ಎಂಬ ಹಟ ಅವರದ್ದು. ಅದನ್ನು ಪ್ರಶ್ನಿಸಿದ ಬರಹವೊಂದು ಪ್ರಕಟವಾದದ್ದೇ ಆ ಸುದ್ದಿಮಿತ್ರರ ಮೇಲೆ ಅವರಿಗೆ ನಖಶಿಖಾಂತ ಕೋಪ ಬಂತು. ಆ ಕೋಪವನ್ನು ಅವರು ನಾಜೂಕಾಗಿ ಹೊರಹಾಕಲು ಬಳಸಿದ ಮಾತು– ‘ಊಟ ಆಯಿತೇ?’.

ಇಷ್ಟಕ್ಕೂ ಅವರು ಒಂದು ಕಾಲದಲ್ಲಿ ವ್ಯಾಪಾರದಲ್ಲಿ ತೊಡಗಿಕೊಂಡಿದ್ದವರು. ತಿಪಟೂರಿನ ಮಂದಿಗೆ ಅವರ ಹೆಸರು ಚಿರಪರಿಚಿತ. ಸಾಹಸಸಿಂಹ ಅಂದರೆ ಆರನೇ ಪ್ರಾಣ. ಅಭಿಮಾನಿಯೇ ನಿರ್ಮಾಪಕ ಆಗಲು ಮುಂದೆ ಬಂದರೆ, ಸಿಂಹ ಬಿಟ್ಟೀತೆ? ನಾಲ್ಕೈದು ಚಿತ್ರಗಳನ್ನು ತಮ್ಮಿಷ್ಟದ ನಾಯಕನಿಗೆಂದು ನಿರ್ಮಿಸಿದ ಈ ವ್ಯಾಪಾರಿ ಸಿನಿಮಾದಲ್ಲಿಯೂ ತಮ್ಮ ವ್ಯಾಪಾರದ ಚಳಕ ಮುಂದುವರಿಸಿದರು.

ಮೊದಮೊದಲು ಸ್ಟಾರ್‌ಗಳ ಚಿತ್ರಗಳನ್ನೇ ನೆಚ್ಚಿಕೊಂಡ ಅವರು ಆಮೇಲಾಮೇಲೆ ಗೆದ್ದ ಎತ್ತುಗಳ ಬಾಲಗಳನ್ನು ಹಿಡಿದದ್ದೂ ಇದೆ. ಅಚ್ಚರಿಯೆಂದರೆ ಮಾತಿಗೂ ಕೃತಿಗೂ ಸಂಬಂಧ ಇಲ್ಲವೆಂಬಷ್ಟು ಅವರ ಅನೇಕ ಚಿತ್ರಗಳು ಅಭಿರುಚಿಯ ದೃಷ್ಟಿಯಿಂದ ಉತ್ತಮವಾಗಿವೆ.

ಸುದ್ದಿಗೋಷ್ಠಿಗಳಲ್ಲಿ ಅವರದ್ದು ಏಕತಾನದ ಮಾತು. ಮೆಲುದನಿಯಲ್ಲಿಯೇ ಒಂದೇ ಶ್ರುತಿಯಲ್ಲಿ ಎಲ್ಲವೂ ಚೆನ್ನ, ಎಲ್ಲರೂ ಚೆಂದ ಎಂಬಂತೆ ನಗುತುಳುಕಿಸುತ್ತಾ ಮಾತಾಡುತ್ತಾರೆ. ಅವರು ಫೇಮಸ್ ಆದಮೇಲೆ ಅನೇಕ ಹೊಸ ನಿರ್ಮಾಪಕರು ತಮ್ಮ ಚಿತ್ರಗಳ ಮುಹೂರ್ತ ಸಮಾರಂಭಕ್ಕೆ ಇವರನ್ನು ಅತಿಥಿಯಾಗಿ ಕರೆಯುತ್ತಿರುತ್ತಾರೆ. ಅಲ್ಲೆಲ್ಲಾ ತಮ್ಮ ಬಂಗಾರದೊಡವೆ ತೊಟ್ಟ ಕೈಗಳನ್ನು ಜೋರಾಗಿ ಆಡಿಸುತ್ತಾ ಠೀವಿಯಿಂದ ಅನುಭವ ಹಂಚಿಕೊಳ್ಳುತ್ತಾರೆ. ಒಬ್ಬ ಅಭಿಮಾನಿ ನಿರ್ಮಾಪಕರಂತೂ ತಮ್ಮ ಚಿತ್ರದಲ್ಲಿ ಅಭಿನಯಿಸುವ ಆಫರನ್ನೂ ಅವರ ಮುಂದಿಡಲಾಗಿ, ಪತ್ನಿ ಬೈಯುತ್ತಾರೆಂಬ ಕಾರಣಕ್ಕೆ ಅದನ್ನು ತಿರಸ್ಕರಿಸಿದರು. ಅವರಿಗೂ ಅಭಿಮಾನಿಗಳಿದ್ದಾರೆ. ಗಂಡಿಗೆ ಮಾತ್ರ ಇಡುವಂಥ ಒಂದು ಬಿರುದನ್ನೂ ಅವರು ದಯಪಾಲಿಸಿದ್ದಾರೆ. ಸಾಹಸಿಂಹ ಕೂಡ ಆ ಬಿರುದನ್ನು ಅನುಮೋದಿಸಿದ್ದು ವಿಶೇಷ.

ಒಬ್ಬ ನಾಯಕ ಗೆದ್ದರೆ ಫಟ್ಟನೆ ಕಾಲ್‌ಶೀಟ್ ಗಿಟ್ಟಿಸಿ ಇನ್ನೊಂದು ಚಿತ್ರ ಸೆಟ್ಟೇರಿಸಿಬಿಡಬಲ್ಲ ನಿಸ್ಸೀಮ. ರೀಮೇಕ್, ಸ್ವಮೇಕ್ ಎರಡನ್ನೂ ಒಂದೇ ತಟ್ಟೆಯಲ್ಲಿ ಇಟ್ಟುಕೊಂಡು ಉಣ್ಣುವ ಪೈಕಿ. ‘ನಾಚಿಕೆ ಗೀಚಿಕೆ ಆಚೆಗೆ’ ಎಂಬ ನಾಣ್ಣುಡಿ ಇವರಿಗೆ ಹೊಂದುತ್ತದೆ. ಕೆಲವು ತಿಂಗಳ ಹಿಂದೆ ಈ ನಿರ್ಮಾಪಕರು ನಾಯಕನ ಕಾಲ್‌ಶೀಟ್ ಪಡೆಯುವುದನ್ನು ಬಿಟ್ಟು ನಾಯಕಿಗಾಗಿಯೇ ಸಿನಿಮಾ ಮಾಡಲು ಮುಂದಾದರು. ಅದೂ ಆ ನಾಯಕಿಯ ಹೆಸರಲ್ಲಿ. ಆಕ್ಷನ್ ಚಿತ್ರವಾದ್ದರಿಂದ ನಾಯಕಿಗೆ ಅಲ್ಲಿ ಸಾಹಸ ದೃಶ್ಯಗಳಲ್ಲಿ ನಟಿಸುವ ಅವಕಾಶ. ಬಲ್ಲವರು ಇದು ಈ ನಿರ್ಮಾಪಕರ ದುಸ್ಸಾಹಸ ಎಂದು ಕಾಲೆಳೆಯುತ್ತಿದ್ದರೂ ಅದಕ್ಕೆ ಕೇರ್ ಮಾಡದೆ ತಮ್ಮ ಬಿರುದನ್ನು ಉಜ್ಜಿಕೊಂಡು ಮುನ್ನಡೆದಿದ್ದಾರೆ.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68